ಎಷ್ಟು ? ಇವರ ಮೇಲೆ ಏನಾದರು ಕ್ರಮ ಕೈಗೊಳ್ಳಲಾಗಿದೆಯೇ ?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಕುಟುಂಬ ಕಲ್ಯಾಣ ಸಚಿವರ ಪರವಾಗಿ) ಶ್ರೀ ಎಂ. ಪಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಸಚಿವರು) :

ಅ) ವೈದ್ಯಾಧಿಕಾರಿಗಳು - 100

ಮಂತ್ರಿ ಮಹೋದಯರು - 6

ಆ) 44 ಮಂದಿ ವೈದ್ಯಾಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ಮುಗಿದಿದ್ದು ಅವರುಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತದೆ. ಇನ್ನೂ 16 ಮಂದಿ ವೈದ್ಯಾಧಿಕಾರಿಗಳ ವಿರುದ್ಧ ವಿಚಾರಣೆಯು ನಡೆಯುತ್ತಿದೆ.

ಇ) ಬಳಿದ ವೈದ್ಯಾಧಿಕಾರಿಗಳ ವಿರುದ್ಧ ಅನಧಿಕೃತ ಗೈರು ಹಾಜರಿಯ ಆಪಾದನೆಯ ಮೇಲೆ 1957ರ ಕರ್ನಾಟಕ ನಾಗರಿಕ ಸೇವಾ, (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಯನುಸಾರ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಪ್ರಕರಣಗಳಲ್ಲಿ ನೆಲಸಿರುವ ವೈದ್ಯರುಗಳ ಬಗ್ಗೆ ಅನಧಿಕೃತ ಮಾಹಿತಿ ಇರುವುದಿಲ್ಲ. ಆದರೂ ಅವರುಗಳ ಅನಧಿಕೃತ ಗೈರು ಹಾಜರಾಗಿರುವ ಪ್ರಯುಕ್ತ 1957ರ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಯನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುತ್ತಿದೆ.

ಹಾಸನ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಸಂಖ್ಯೆ

751 - ಶ್ರೀ ಜಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ನೀಡುವುದು)

ಆ) ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಖಾಲಿ ಇರುವ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು ? ಇದರಲ್ಲಿ ಮಹಿಳಾ ವೈದ್ಯಾಧಿಕಾರಿಗಳು, ಪುರುಷರು ಎಷ್ಟು ? ಇದರಲ್ಲಿ ಮಹಿಳಾ ವೈದ್ಯಾಧಿಕಾರಿಗಳು, ಪುರುಷರು ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಇ) 1994-95ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಈ) 1995-96ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಡಾ॥ ಹೆಚ್. ಸಿ. ಮಹದೇವಪ್ಪ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ವೈದ್ಯಾಧಿಕಾರಿಗಳ ಸಂಖ್ಯೆ : 28

ತಾಲ್ಲೂಕುವಾರು ವಿವರ

1)	ಆಲೂರು	1	(5)	ಬೇಲೂರು	5
2)	ಅರಕಲಗೂಡು	3	(6)	ಸಕಲೇಶಪುರ	8
3)	ಅರಸೀಕೆರೆ	1	(7)	ಹೊಳೆನರಸೀಪುರ	1
4)	ಚೆನ್ನರಾಯಪಟ್ಟಣ	3	(8)	ಹಾಸನ	6

ಆ) ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಖಾಲಿ ಇರುವ ವೈದ್ಯರ ಸಂಖ್ಯೆ:2, ಇವುಗಳಲ್ಲಿ ಮಹಿಳಾ ವೈದ್ಯರ ಸಂಖ್ಯೆ:2 ಹುದ್ದೆಗಳು

ಇ) ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡ ವೈದ್ಯಾಧಿಕಾರಿಗಳ ಸಂಖ್ಯೆ : 29

ತಾಲ್ಲೂಕುವಾರು ವಿವರ

1)	ಆಲೂರು	2	(5)	ಬೇಲೂರು	2
2)	ಅರಕಲಗೂಡ	2	(6)	ಸಕಲೇಶಪುರ	6
3)	ಅರಸೀಕೆರೆ	3	(7)	ಹೊಳೆನರಸೀಪುರ	5
4)	ಚೆನ್ನರಾಯಪಟ್ಟಣ	4	(8)	ಹಾಸನ	5

ಈ) 50 ವೈದ್ಯರನ್ನು ಆಯ್ಕೆ ಮಾಡಲಾಗಿದೆ. ಇವರಲ್ಲಿ 35 ವೈದ್ಯರು ಹಾಜರಾಗಿದ್ದಾರೆ.

1)	ಆಲೂರು	2	(5)	ಬೇಲೂರು	2
2)	ಅರಕಲಗೂಡ	3	(6)	ಸಕಲೇಶಪುರ	7
3)	ಅರಸೀಕೆರೆ	7	(7)	ಹೊಳೆನರಸೀಪುರ	3
4)	ಚೆನ್ನರಾಯಪಟ್ಟಣ	5	(8)	ಹಾಸನ	6

95-96ನೇ ಸಾಲಿಗೆ ಒಟ್ಟು ಆಯ್ಕೆ 50 ವೈದ್ಯರಲ್ಲಿ, 35 ವೈದ್ಯರು ಹಾಜರಾಗಿದ್ದಾರೆ, ಉಳಿಕೆ 4 ವೈದ್ಯರು ಹಾಜರಾಗಿದ್ದ ಹಿಮತ್ತ ಪ್ರಮಾಣ ಪತ್ರಕ್ಕಾಗಿ ನೇಮಕಾತಿ ನಿರೀಕ್ಷಣೆಯಲ್ಲಿದೆ. 11 ವೈದ್ಯರು ಹಾಜರಾಗಿರುವುದರಿಂದ ಸ್ಥಳ ನೇಮಕಾತಿ ನೀಡಿರುವುದಿಲ್ಲ.

ಭಾರತೀಯ ವೈದ್ಯಪದ್ಧತಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು

753 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಾನೂನು ಮತ್ತು ಸಂಸದೀಯ